

# ಸೇವೆಯ ಸೋಗಿನಲ್ಲಿ ಮಾರುವೇಷದಲ್ಲಿ ಮತಾಂತರ



ರಾಜೇಂದ್ರ ಚಡ್ಡ
ಪ್ರಜ್ಞಾಪ್ರವಾಹ
ಅ.ಭಾ.ಸಹಸಮನ್ವಯಕ

ಕ್ರೈಸ್ತ ಮಿಶನರಿಗಳು ಸೇವೆಯ ಸೋಗಿನಲ್ಲಿ ಹಿಂದುಳಿದ ಪರಿಶಿಷ್ಟ ಜಾತಿ ಹಾಗೂ ವನವಾಸಿಗಳನ್ನು ಮತಾಂತರ ಮಾಡುತ್ತಿರುವುದು ಇಂದು ದೇಶದಲ್ಲಿ ಜನಸಂಖ್ಯಾ ಅಸಂತುಲನಕ್ಕೆ ಕಾರಣವಾಗಿದೆ. ಕ್ರೈಸ್ತ ಶಾಲೆ, ಆಸ್ಪತ್ರೆಗಳು ಬಹುಪಾಲು ಮುಗ್ಧ ಜನರನ್ನು ಮೋಸಗೊಳಿಸಿ ಮತಾಂತರಗೊಳಿಸಲೆಂದೇ ಇರುವ ಕೇಂದ್ರಗಳು. ಬಹುರಾಷ್ಟ್ರೀಯ ಕಂಪನಿಗಳಂತೆ ಕ್ರೈಸ್ತ ಮಿಶನರಿಗಳು ಬೃಹತ್ ಮೊತ್ತದ ಫಂಡ್‌ಗಳನ್ನು ಕ್ರೋಢೀಕರಿಸುತ್ತಿರುವರು. ಮಹಾತ್ಮಾ ಗಾಂಧಿ, ಡಾ|| ಡೇವಿಡ್ ಬಿ.ವೈರೆಟ್, ಅಮರ್ತ್ಯಸೇನ್, ಹೆಚ್.ವಾಲ್ಟರ್, ಲೋಕಮಾನ್ಯ ತಿಲಕ್ ಮುಂತಾದ ವಿದ್ವಾಂಸರ ಅಭಿಪ್ರಾಯಗಳನ್ನು ಉಲ್ಲೇಖಿಸಿ ಪ್ರಸ್ತುತ ಸೇವೆಯ ಸೋಗಿನಲ್ಲಿ ಮತಾಂತರ ಎಂಬ ಲೇಖನವನ್ನು ಸ್ಪಷ್ಟ ರೂಪದಲ್ಲಿ ತಿಳಿಸಲಾಗಿದೆ.

ಜನಸಂಖ್ಯಾ ಅಸಂತುಲನಕ್ಕೆ ಮತಾಂತರ ಬಹು ದೊಡ್ಡ ಕಾರಣವಾಗಿದೆ. ಕ್ರೈಸ್ತ ಮಿಶನರಿಗಳ ಎಲ್ಲಾ ಚಟುವಟಿಕೆಗಳ ಮುಖ್ಯ ಉದ್ದೇಶ ಮತಾಂತರ. ಈ ಸಂಬಂಧ ಮಹಾತ್ಮಾ ಗಾಂಧೀಜಿಯವರ ಹೇಳಿಕೆ ಮಹತ್ವಪೂರ್ಣವೆನಿಸಿದೆ – 'ಸಾಮಾಜಿಕ ಸೇವೆಯ ಮುಸುಕಿನಲ್ಲಿ ಮತಾಂತರ ಮಾಡುವುದನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ ವಾಸ್ತವಿಕವಾಗಿ ಸೇವೆಯೇ ಅಲ್ಲಾ; ಉಳಿದ ಉದ್ಯೋಗಗಳಂತೆ ಮತಾಂತರವೂ ಒಂದು ದಂಧೆಯಾಗಿದೆ. ನನಗೆ ಸ್ಮರಣೆಯಿರುವಂತೆ ನಾನೊಮ್ಮೆ ಒಬ್ಬ ಪಾದ್ರಿಯ ವರದಿಯನ್ನು ಓದಿದೆ. ಅದರಲ್ಲಿ ಮತಾಂತರಕ್ಕೆ ಆದ ವೆಚ್ಚದ ಲೆಕ್ಕದ ಜೊತೆಗೆ ಹೊಸ ವರ್ಷದ ಬೆಳೆ (ಮತಾಂತರ) ತೆಗೆಯಲು ಬಜೆಟ್‌ನ್ನು ಕೊಡಲಾಗಿತ್ತು. (12.6.1937 ಗಾಂಧೀಜಿ) ಈ ಮೇಲಿನ ಹೇಳಿಕೆಯ ಸತ್ಯತೆ ಡಾ|| ವಾಲ್ಟರ್ ಬ್ರೂಸ್ ಡೇವಿಡ್ ವಿಲಿಯಮ್ ಕೇರಿ ಇವರ ವಿವರಣೆಯಿಂದ ಸ್ಪಷ್ಟವಾಗುತ್ತದೆ. ಅವರು ತಮ್ಮ ಆತ್ಮಚರಿತ್ರೆಯ ಪುಟ ಸಂ.51 ರಲ್ಲಿ ಈ ಕೆಳಗಿನಂತೆ ಬರೆದಿರುವರು. 'ಹೊಸ ಮಸೀಹಾಗಳಿಗೆ ಬಾಪ್ತಿಸ್ಮಾ ಆದನಂತರ ನೌಕರಿ ಸಿಗುವುದು ಕಷ್ಟವಾಗಿದೆ, ಯಾಕೆಂದರೆ ಅವರು ಹಿಂದಿನ ಜಾತಿಯ